3. ಮೈಸೂರು ಸಕ್ಕರೆ ಕಾರ್ಖಾನೆಯ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

4. **ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:**

ವಿಷಯ: ನೈಸ್ ಯೋಜನೆಗೆ ಸಂಬಂಧಿಸಿದಂತೆ ರೈತರು ಮಾನ್ಯ ಮುಖ್ಯಮಂತ್ರಿಯವರ ಗೃಹ ಕಛೇರಿ ಕೃಷ್ಣಾ ಎದರು ನಡೆಸುತ್ತಿದ್ದ ಪ್ರತಿಭಟನೆ ಮೇಲೆ ಪೋಲಿಸರು ನಡೆಸಿದ ಲಾಠಿ ಪ್ರಹಾರದ ಬಗ್ಗೆ.

ಶ್ರೀ ಎ ಎಸ್ ಪಾಟೀಲ್ (ನಡಹಳ್ಳಿ) (ದೇವರಹಿಪ್ಪರಗಿ): ಮಾನ್ಯ ಅಧ್ಯಕ್ಷರೆ, ದಿನಾಂಕ 27.06.2010ರಂದು ಮಾನ್ಯ ಮುಖ್ಯಮಂತ್ರಿಯವರ ಗೃಹ ಕಛೇರಿ ಕೃಷ್ಣಾ ಎದುರು ಮತ್ತು ಹೆಮ್ಮಿಗೆಪುರ ಬಳಿ ನೈಸ್ ರಸ್ತೆಯಲ್ಲಿ ನೈಸ್ ಯೋಜನೆಗೆ ಸಂಬಂಧಿಸಿದಂತೆ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ರೈತರ ಮೇಲೆ ಲಾಠಿ ಪ್ರಹಾರ ನಡೆಸಿ ಪೊಲೀಸರು ಮನಬಂದಂತೆ ಹೊಡೆದಿದ್ದಾರೆ, ಅವರ ಲಾಠಿ ಏಟಿಗೆ ಬೆದರಿದ ರೈತರು ಸ್ಥಳದಿಂದ ಓಡಿ ಹೋದರೂ ಕೂಡ ಬಿಡದೆ ಪೊಲೀಸ್‌ನವರು ಅವರ ಬೆನ್ನುಹತ್ತಿ ಹಿಡಿದು ಕಬ್ಬಿಣದ ಸಲಾಕೆಗಳಿಂದ ಥಳಿಸಿದ್ದಾರೆ ಮತ್ತು ಅವರಿಂದ ತಪ್ಪಿಸಿಕೊಳ್ಳುವುದಕ್ಕೆ ಆಶ್ರಯ ಅರಸಿ ಬೇರೆ ಬೇರೆ ಮನೆಗಳಿಂದ ರೈತರು ನುಗ್ಗಿ ಹೋದರೂ ಕೂಡ ಅವರನ್ನು ಬಿಡದೆ ಪೊಲೀಸ್‌ನವರು ಮನಬಂದಂತೆ ಥಳಿಸಿದ್ದಾರೆ ಮತ್ತು ರೈತರ ಮೇಲೆ ಹಲ್ಲೆ ಮಾಡಿ ಇಲ್ಲಸಲ್ಲದ ಕೇಸುಗಳನ್ನು ಹಾಕಿ ಭಯದ ವಾತಾವರಣ ಸೃಷ್ಟಿ ಮಾಡಿದ್ದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯಬಯಸುತ್ತೇನೆ. ಇದು ಎಲ್ಲಾ ಟಿ.ವಿ. ಮಾಧ್ಯಮಗಳಲ್ಲೂ ಗಂಭೀರವಾಗಿ ಪ್ರಚಾರವಾಗಿದೆ, ಪತ್ರಿಕೆಗಳಲ್ಲೂ ಬಂದಿದೆ. ಅದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) (ಗೃಹ ಮತ್ತು ಮುಜರಾಯಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯ ಬಿ.ಎಂ.ಐ.ಸಿ. ನೈಸ್ ಕಾರಿಡಾರ್. ವಿವಾದದ ಹಿನ್ನಲೆಯಲ್ಲಿ ಹೆಮ್ಮಿಗೆಪುರ ಹಾಗೂ ಅಕ್ಕಪಕ್ಕದ

ಸುಮಾರು 100 ರಿಂದ 120 ಜನ ಗ್ರಾಮಸ್ಥರು, ಇದ್ದಕ್ಕಿದ್ದಂತೆ ಅಕ್ರಮಗುಂಪು ಕಟ್ಟಿಕೊಂಡು, ನೈಸ್ ರಸ್ತೆಯಲ್ಲಿನ ಹೆಮ್ಮಿಗೆಪುರ ಕ್ರಾಸ್‌ನಲ್ಲಿರುವ ನೈಸ್ ಕಂಪನಿಯ ಕಛೇರಿಯನ್ನು ಧ್ವಂಸಗೊಳಿಸುವ ಉದ್ದೇಶದಿಂದ ಕಛೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿರುತ್ತಾರೆಂದು ಮಾಹಿತಿ ಬಂದ ಕೂಡಲೇ ಸ್ಥಳಕ್ಕೆ ಧಾಮಿಸಿದ ಪಿ.ಎಸ್.ಐ. ತಲಘಟ್ಟಪುರ ಹಾಗೂ ಸಿಬ್ಬಂದಿಯವರು ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಸದರಿ ಅಕ್ರಮ ಕೂಟ ಸದಸ್ಯರಿಗೆ ತಿಳುವಳಿಕೆ ನೀಡಲು ಮುಂದಾದಾಗ, ಪ್ರತಿಭಟನಾಕಾರರು ಬೆಂಗಳೂರು ನಗರದಲ್ಲಿ ತಮ್ಮ ಮುಖಂಡರಾದ ಹೆಮ್ಮಿಗೆಪುರದ ಶ್ರೀ ಪಂಚಲಿಂಗಯ್ಯರವರನ್ನು ದಸ್ತಗಿರಿ ಮಾಡಿದ್ದು, ಕೂಡಲೇ ಬಿಡುಗಡೆ ಮಾಡಬೇಕು ಇಲ್ಲವಾದಲ್ಲಿ ರಸ್ತೆತಡೆ ಮಾಡುವುದಾಗಿ ಹೇಳಿ ಏಕಾಏಕಿ ನೈಸ್ ರಸ್ತೆಗೆ ಬಂದು ಎರಡೂ ಕಡೆಗಳಿಂದ ವಾಹನಗಳು ಓಡಾಡದಂತೆ ಅಡ್ಡಗಟ್ಟಿ ರಸ್ತೆತಡೆ ಮಾಡಿ ಸಂಚಾರಕ್ಕೆ ಅಡಚಣೆ ಉಂಟು ಮಾಡಿ ನಿರ್ಬಂಧ ಹೇರಿರುತ್ತಾರೆ.

ಈ ಬಗ್ಗೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ ಪಿ.ಎಸ್.ಐ. ತಲಘಟ್ಟಪುರ ಠಾಣೆ ಇವರು ಪ್ರತಿಭಟನಾಕಾರರಿಗೆ ಇಂತಹ ಕಾನೂನು ಬಾಹಿರ ಕೃತ್ಯವನ್ನು ಕೈಬಿಡಲು, ತಿಳುವಳಿಕೆ ನೀಡಿದರೂ ಸಹ ಅಕ್ರಮ ಕೂಟದ ಸದಸ್ಯರು ರಸ್ತೆ ತಡೆಯನ್ನು ಮುಂದುವರಿಸಿದ್ದು, ಸ್ಥಳಕ್ಕೆ ಆಗಮಿಸಿದ ಡಿ.ಎಸ್.ಪಿ. ರಾಮನಗರ ಉಪವಿಭಾಗ ಇವರು ಪರಿಸ್ಥಿತಿಯ ಸೂಕ್ಷ್ಮತೆಯನ್ನು ಆಧರಿಸಿ, ಉಪವಿಭಾಗ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸ್ಥಳಕ್ಕೆ ಕೂಡಲೇ ನಿಯೋಜಿಸಿಕೊಂಡು ಬಂದೋಬಸ್ತ್ ಕ್ರಮ ಜರುಗಿಸಿರುತ್ತಾರೆ. ಸಂಜೆ ಸುಮಾರು 6.00 ಗಂಟೆಗೆ ಬಿಎಂಐಸಿ, ನೈಸ್ ರಸ್ತೆಯಲ್ಲಿ ಕೆಲವು ವಾಹನಗಳು ಚಲಿಸಲು ಮುಂದಾದಾಗ, ಉದ್ರೇಕಗೊಂಡ ಗ್ರಾಮಸ್ಥರು ಹೆಮ್ಮಿಗೆಪುರದ ಕ್ರಾಸ್ ಬಳಿ ನಿರ್ಮಾಣ ಹಂತದಲ್ಲಿರುವ ಬ್ರಿಡ್ಜ್ ಹತ್ತಿರ ಇರುವ ದೊಣ್ಣೆ, ಕಬ್ಬಿಣದ ರಾಡುಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಚಲಿಸಲು ಪ್ರಯತ್ನಿಸಿದ ವಾಹನಗಳನ್ನು ಮತ್ತು ನೈಸ್ ಕಂಪನಿಯ ಸೆಕ್ಯೂರಿಟಿ ಬಾಕ್ಸ್‌ಗಳನ್ನು ಒಡೆದು ಜಖಂಗೊಳಿಸಿದ್ದಲ್ಲದೆ, ಇದನ್ನು ತಡೆಯಲು ಪ್ರಯತ್ನಿಸಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಸಹ ಹಲ್ಲೆ ನಡೆಸಿರುತ್ತಾರೆ. ಉದ್ರಿಕ್ತ ಗುಂಪು

0-242-21

ಸಾರ್ವಜನಿಕ ಆಸ್ತಿಪಾಸ್ತಿ ಮತ್ತು ಪ್ರಾಣಕ್ಕೆ ಹಾನಿ ಮಾಡುವ ಪರಿಸ್ಥಿತಿ ನಿರ್ಮಾಣವಾದ ಕಾರಣ, ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಪೋಲಿಸರು ಕನಿಷ್ಠ ಬಲ ಪ್ರಯೋಗ ಮಾಡಿ, ಶ್ರೀ ಮುನಿರಾಜು ಮತ್ತು ಇತರೆ 30 ಜನರನ್ನು ಪೊಲೀಸ್ ವಶಕ್ಕೆ ಪಡೆದುಕೊಂಡಿದ್ದು, ನ್ಯಾಯಧೀಶರ ಮುಂದೆ ಹಾಜರುಪಡಿಸಿದಾಗ ಇವರುಗಳನ್ನು ಒಂದು ದಿನದ ಮಟ್ಟಿಗೆ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ತಲೆಮರೆಸಿಕೊಂಡ ಆರೋಪಿಗಳನ್ನು ಪತ್ತೆಹಚ್ಚಲು ವಿಶೇಷ ತಂಡವನ್ನು ರಚಿಸಲಾಗಿದೆ.

ಈ ಘಟನೆಯಲ್ಲಿ ಒಬ್ಬ ಡಿ.ವೈ.ಎಸ್.ಪಿ., ಒಬ್ಬ ಪಿ.ಐ., ಮೂರು ಎ.ಎಸ್.ಐಗಳು. ಒಬ್ಬ ಹೆಚ್.ಸಿ. ಮತ್ತು ಐದು ಪಿ.ಸಿ.ಗಳು ಸೇರಿದಂತೆ 11 ಜನ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಗಾಯಗಳಾಗಿದ್ದು, ಅವರುಗಳು ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿರುತ್ತಾರೆ. ಈ ಬಗ್ಗೆ ಪಿ.ಎಸ್.ಐ. ತಲಘಟ್ಟಪುರ ರವರು ನೀಡಿದ ದೂರಿನಂತೆ ಮೊಕದ್ದಮೆ ಸಂಖ್ಯೆ: 356/2010 ಕಲಂ 120 (ಬಿ), 143, 146, 147, 148, 341, 427, 353, 332, 355 ಸಹಿತ 149 ಐಪಿಸಿ ಮತ್ತು ಕಲಂ 2 (ಎ) (ಬಿ) Karnataka Prevention of Desctruction of Public Property Act 1981 ರೀತ್ಯಾ ಪ್ರಕರಣ ದಾಖಲಿಸಲಾಗಿದೆ.

ಶ್ರೀ ಹೆಚ್ ಡಿ ರೇವಣ್ಣ: ಅಲ್ಲಿನ Dy.S.P ರೈತರನ್ನು ಬೂಟು ಕಾಲಿನಲ್ಲಿ ಒದ್ದಿದ್ದಾರೆ.

ಅಧ್ಯಕ್ಷರು: ಇದು ಶೂನ್ಯ ವೇಳೆ.

ಶ್ರೀ ಹೆಚ್ ಡಿ ರೇವಣ್ಣ: ಜಗದೀಶ್ ಶೆಟ್ಟರ್‌ರವರಿಗೆ ಟಿ.ವಿ ನೋಡುವುದಕ್ಕೆ ಹೇಳಿ. ರಾಜ್ಯದಲ್ಲಿ ಇಂಥ Dy.S.P ಗಳನ್ನು ಇಡಬೇಕೆ? ಈ ಬಗ್ಗೆ ನಾವು ನಿಲುವಳಿ ಸೂಚನೆ ಮಂಡಿಸುವವರಿದ್ದೇವೆ. ಆ Dy.S.P ಮೇಲೆ Criminal case ಹಾಕಬೇಕು, suspened ಮಾಡಬೇಕು. ಇಲ್ಲಿ ಸುಮ್ಮನೆ ಓದುವುದಲ್ಲ.

ಅಧ್ಯಕ್ಷರು: ಇದು reference ಮಾತ್ರ. ಮತ್ತೆ ಕೇಳಲಿಕ್ಕೆ ಅವಕಾಶವಿಲ್ಲ.

(ಗೊಂದಲ)

ಅಧ್ಯಕ್ಷರು: ಇದು Zero hour.

(ಗೊಂದಲ)

ಅಧ್ಯಕ್ಷರು: ನೀವು ಬೇರೆ ರೂಪದಲ್ಲಿ ತನ್ನಿ.

(ಗೊಂದಲ)

ಶ್ರೀ ಎ ಎಸ್ ಪಾಟೀಲ್(ನಡಹಳ್ಳಿ): ನಾವು ರೈತರ ಪರ ಎಂದು ಹೇಳುತ್ತಾರೆ ಆದರೆ, ರೈತರನ್ನು ಬೂಟ್ ಕಾಲಿನಲ್ಲಿ ಒದೆಯುವುದು.

ಅಧ್ಯಕ್ಷರು: ಬೇರೆ ರೂಪದಲ್ಲಿ ತನ್ನಿ. ಚರ್ಚೆಗೆ ಏನೂ ಅಡ್ಡಿ ಇಲ್ಲ.

(ಗೊಂದಲ)

ಅಧ್ಯಕ್ಷರು: ಇದು ಶೂನ್ಯ ವೇಳೆ. Reference ಮಾಡಿದ್ದೀರಿ ಅವರು ಉತ್ತರ ಹೇಳಿದ್ದಾರೆ. ತಾವು ಬೇರೆ ರೂಪದಲ್ಲಿ ತನ್ನಿ ಅವಕಾಶ ಕೊಡೋಣ.

(ಗೊಂದಲ)

ಅಧ್ಯಕ್ಷರು: ಇದು ಪ್ರಶ್ನೋತ್ತರ ಅಲ್ಲ. ಇದು ಶೂನ್ಯ ವೇಳೆ. ನೀವು ಪ್ರಶ್ನೆ ಕೇಳಿದರೆ ಹೇಗೆ? Zero hour ನಲ್ಲಿ ತಾವು ಕೇಳಿದ್ದೀರಿ. Reference ಮಾಡಿದ್ದಾರೆ. ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಚರ್ಚೆಗೆ ಅವಕಾಶವಿಲ್ಲ.

ಶ್ರೀ ಎ ಎಸ್ ಪಾಟೀಲ್(ನಡಹಳ್ಳಿ): ಒಂದು ನಿಮಿಷ ನನಗೆ ಅವಕಾಶ ಕೊಡಿ. ನಾನು ಜಾಸ್ತಿ ಸಮಯ ಕೇಳುತ್ತಿಲ್ಲ.

ಅಧ್ಯಕ್ಷರು: ಅದು ಹೇಗೆ ಸಾಧ್ಯ? ತಾವು referemce ಮಾಡಿದ್ದೀರಿ. ತಾವು ಬೇರೆ ರೂಪದಲ್ಲಿ ಚರ್ಚೆ ಮಾಡುವಾಗ ಇದನ್ನು ಚರ್ಚೆ ಮಾಡಿ. ಶೂನ್ಯ ವೇಳೆಯಲ್ಲಿ ಪುನ: ಪುನ: ಪ್ರಶ್ನೆ ಕೇಳುವುದಕ್ಕೆ ಅವಕಾಶವಿಲ್ಲ. ಶೂನ್ಯ ವೇಳೆಯಲ್ಲಿ ಅವಕಾಶ ಕೊಡಿ ಎಂದರೆ ಹೇಗೆ ಸಾಧ್ಯ? ನೀವೂ ಸಹಕಾರ ಕೊಡಬೇಕು.

ಶ್ರೀ ಎ ಎಸ್ ಪಾಟೀಲ್ ನಡಹಳ್ಳಿ: ನನಗೆ ಒಂದು ನಿಮಿಷ ಕೇಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ನೀವು ಬೇರೆ ರೂಪದಲ್ಲಿ ತರಬೇಕಾಗಿತ್ತು. ನೀವು ಶೂನ್ಯವೇಳೆಯಲ್ಲಿ ಕೇಳಿ ಚರ್ಚೆಗೆ ಅವಕಾಶ ಕೊಡಿ ಎಂದರೆ ಆಗುವುದಿಲ್ಲ.

ದಯಮಾಡಿ, ಕುಳಿತುಕೊಳ್ಳಿ ನೀವು ಎದ್ದು ನಿಂತು ಹೇಳಿದರೆ ನಾನು ಹೇಗೆ ಹೇಳಲಿ?

ಶ್ರೀ ಎ ಎಸ್ ಪಾಟೀಲ್ ನಡಹಳ್ಳಿ: ಉತ್ತರದಲ್ಲಿ ಕನಿಷ್ಠ ಬಲಪ್ರಯೋಗ ಎಂದು ಕೊಟ್ಟಿದ್ದಾರೆ. ಅದರ, ಪತ್ರಿಕೆಗಳಲ್ಲಿ ಮತ್ತು ಟಿ.ವಿ.ಮಾಧ್ಯಮಗಳಲ್ಲಿ ನೋಡಿದಾಗ ನಮಗೆಷ್ಟು ನೋವು ಎನ್ನಿಸುತ್ತದೆ ಎಂದರೆ, ಮೂರು ನಾಲ್ಕು ಜನ ಪೊಲೀಸರು ಒಬ್ಬ ರೈತರನ್ನು ಹಿಡಿದುಕೊಂಡು ಹೋಗುವ ರೀತಿ ನೋಡಿದರೆ ಬಹಳ ನೋವಾಗುತ್ತದೆ. ಇದನ್ನು ಸರ್ಕಾರ ಕನಿಷ್ಠ ಬಲಪ್ರಯೋಗ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು: ನೀವು ಶೂನ್ಯವೇಳೆಯಲ್ಲಿ ಈ ರೀತಿಯಾಗಿ ಚರ್ಚೆಸಿದರೆ ನಾನು ಅವಕಾಶ ಕೊಡುವುದಿಲ್ಲ. ದಯಮಾಡಿ ನೀವಿ ಬೇರೆ ರೂಪದಲ್ಲಿ ತನ್ನಿ. ರೇವಣ್ಣನವರೆ ತಾವು ಮೆನ್‌ಷನ್ ಮಾಡಿ.

ಶ್ರೀ ಎ ಎಸ್ ಪಾಟೀಲ್ ನಡಹಳ್ಳಿ: ದೌರ್ಜನ್ಯ ಮಾಡಿರುವ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು ಅವರ ಮೇಲೆ ಕ್ರಮ ಕೈಗೊಳ್ಳಬೇಕು ಅವರನ್ನು ಸಸ್ಪೆಂಡ್ ಮಾಡುವ ಕೆಲಸ ಸರ್ಕಾರ ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ: ರೇವಣ್ಣನವರ ಆಸ್ಥಾನದಲ್ಲಿ ಬಿಜಾಪುರದ ಎ.ಎಸ್.ಪಾಟೀಲ್ ರವರು ಹೇಗೆ ಬಂದರು?

ಶ್ರೀ ಹೆಚ್ ಡಿ ರೇವಣ್ಣ: ಮಾನ್ಯ ಕಾರಜೋಳ್‌ರವರೆ, ಈ ಬಗ್ಗೆ ವಿಶೇಷವಾಗಿ ನಿಲುವಳಿ ಸೂಚನೆ ತರುತ್ತೇವೆ ಅದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಗೋವಿಂದ ಎಂ ಕಾರಜೋಳ: ಅವರು ಬರಬಾರದು ಅಲ್ಲವೆ ಅವರು ಹೇಗೆ ಬಂದರು?

ಆ) ವಿಷಯ: ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಹಿಂದುಳಿದ ವರ್ಗಗಳ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಟೆಂಡರ್ ಕರೆಯದೇ ಪ್ಯಾಕೇಜ್ ಮೂಲಕ ನೀಡಿರುವ ಬಗ್ಗೆ.

ಶ್ರೀ ಹೆಚ್ ಡಿ ರೇವಣ್ಣ (ಹೊಳೇನರಸಿಪುರ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ ಮತ್ತು ಹಿಂದುಳಿದ ವರ್ಗಗಳ ಹಾಗೂ ಇತರೆ ವರ್ಗಗಳ ಒಟ್ಟು 20 ವಸತಿ ಶಾಲೆಗಳ ಕಟ್ಟಡಗಳ